O.S. ನಂಬರಃ 34/2020

ಪಿ. ಡಬ್ಲ್ಯೂಃ 1

ದಿಃ 02-08-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಎ.ಎನ್.ಟಿ. ವಕೀಲರಿಂದಃ</u>

ದಾವಾ ಆಸ್ತಿಗಳ ಕುರಿತಾಗಿ ದಿನ್ನಾ ಹಾಗೂ ಆತನ ಸಹೋದರರ ನಡುವೆ ಪಾಲುವಾಟ್ನಿಯಾಗಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಪೈಕಿ ಯಾವ ಆಸ್ತಿ ಯಾರು ಯಾರು ವಹಿವಾಟು ಮಾಡಿಕೊಂಡು ಬರಬೇಕೆಂದು ನಿರ್ಧಾರವಾಗಿಲ್ಲ ಎಂದರೆ ಸರಿ. ಒಟ್ಟು ಕುಟುಂಬದ ನಾತೆಯಿಂದ ದಾವಾ ಆಸ್ತಿಗಳ ಮಂಜೂರಿಗಾಗಿ ಟ್ರಿಬುನಲ್ ಗೆ ನನ್ನ ಸಹೋದರನಾದ ಗೋವಿಂದ ದಿನ್ನಾ ನಾಯ್ಕ ಅರ್ಜಿ ಸಲ್ಲಿಸಿದ್ದ ಎಂದರೆ ಸರಿ. ದಾವಾ ಆಸ್ತಿಗಳಿಗೆ ಸಂಬಂಧಿಸಿದ ಭೂ ನ್ಯಾಯ ಮಂಡಳಿ ಆದೇಶವನ್ನು ಹಾಗೂ ಪಟ್ಟಾ ನೀಡಿದ ಬಗ್ಗೆ ಇರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

ದಾವಾ ಅನುಸೂಚಿಯಲ್ಲಿಯ ಸರ್ವೇ ನಂ. 298/1 ಎ ರಲ್ಲಿರುವ ಮನೆ ನಂ. 360 ಇದು ಕುಟುಂಬದ ಆಸ್ತಿ ಇದ್ದು, ಪಿತ್ರಾರ್ಜಿತವಾಗಿದೆ ಎಂದರೆ ಸರಿ. ಸದರಿ ಮನೆ ಅಜ್ಜನಾದ ಬೀರಪ್ಪನ ಕಾಲದಿಂದಲೂ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ 1 ನೇ ಪ್ರತಿವಾದಿ ವಾಸವಿದ್ದಾನೆಂದರೆ ಸರಿ. ಸದರಿ ಮನೆಯಲ್ಲಿ ಎಲ್ಲರಿಗೂ ಹಕ್ಕಿದೆಯೆಂದರೆ 1 ನೇ

ಪ್ರತಿವಾದಿ ವಾಸವಿರುವುದರಿಂದ ಅವರೊಬ್ಬರಿಗೆ ಮಾತ್ರ ಹಕ್ಕಿದೆ ಎಂದು ಹೇಳುತ್ತಾರೆ. ಮನೆ ನಂ. 360 ರ ಕುರಿತಾಗಿ ನಾನು ಮತ್ತು ಉಳಿದ ಕುಟುಂಬದ ಸದಸ್ಯರು 1 ನೇ ಪ್ರತಿವಾದಿ ಹೆಸರಿನಲ್ಲಿ ಹಕ್ಕು ಬಿಟ್ಟುಕೊಟ್ಟಿಲ್ಲ ಮತ್ತು ಯಾವುದೇ ಅಧೀಕೃತ ದಾಖಲೆ ಇರುವುದಿಲ್ಲ ಎಂದರೆ ಸರಿ.

ಮನೆ ನಂ. 1056 ನ್ನು ನಾನು ಕಟ್ಟಿಸಿಕೊಳ್ಳಲು ಪಂಚಾಯಿತಿ ಪರವಾನಿಗೆ ಪಡೆದಿರುತ್ತೇನೆ. ಮನೆ ಕಟ್ಟಿಕೊಳ್ಳಲು ಪಡೆದ ಪರವಾನಿಗೆ ಪತ್ರ ನನ್ನ ಬಳಿ ಇದೆ ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸದರಿ ಮನೆಯನ್ನು ನನ್ನ ಹೆಂಡತಿ ಸಂಬಳದಿಂದ ನಿರ್ಮಿಸಲಾಗಿದೆಯೆಂದು ತಿಳಿಸಿದ್ದೇನೆ ಎಂದರೆ ಸಾಕ್ಷಿ, ನನ್ನ ಹೆಂಡತಿ ಮತ್ತು ನಾನು ಸೇರಿ ಕಟ್ಟಿಸಿದ್ದೇವೆ ಎಂದು ಹೇಳುತ್ತಾರೆ. ಮನೆ ಕಟ್ಟಿಸಲು ಖಾಸಗಿ ಬ್ಯಾಂಕುಗಳಲ್ಲಿ ಲೋನ್ ಪಡೆದಿರುತ್ತೇನೆ. ಸಾಲ ಪಡೆದ ಬಗ್ಗೆ ಬ್ಯಾಂಕುಗಳಲ್ಲಿ ದಾಖಲೆ ಸಿಗುತ್ತವೆ ಎಂದರೆ ಸರಿ. ಬ್ಯಾಂಕುಗಳಲ್ಲಿ ಸಾಲ ಪಡೆದು ಮನೆ ಕಟ್ಟಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ನಂ. 1056 ಸಹ ನನ್ನ ಸ್ವಂತ ಆಸ್ತಿಯಲ್ಲ, ಅದೂ ಸಹ ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿ ಹಾಗೂ ಆತನ ಸಹೋದರರಾದ ಬೊಬ್ರಿ ಹಾಗೂ ಗಣಪತಿ ರವರ ಕವಲುಗಳಿಗೆ ತಲಾ 1/3 ಹಿಸ್ಸೆ ಮಾಡಲು ನನ್ನ ತಕರಾರು ಇಲ್ಲ ಎಂದರೆ ಸರಿ. ಸರ್ವೇ ನಂ. 298/1ಎ ದಲ್ಲಿ 12 ನೇ ಪ್ರತಿವಾದಿ ಸಹ ಮನೆ

ಕಟ್ಟಿಸಿಕೊಂಡಿದ್ದಾನೆ ಎಂದರೆ ಸರಿ. 12 ನೇ ಪ್ರತಿವಾದಿ ಮನೆ ನಂ. 360/ಬಿ ಎಂದರೆ ಸರಿ. ಸರ್ವೇ ನಂ. 298/1ಎ ದಲ್ಲಿ ಮಂಜುನಾಥ ಗಣಪತಿ ನಾಯ್ಕ (22 ನೇ ಪ್ರತಿವಾದಿ) ರವರ ಮನೆ ಸಹ ಇದೆ ಎಂದರೆ ಸರಿ. ಪಾಲುವಾಟ್ನಿ ಸಮಯದಲ್ಲಿ 12 ನೇ ಪ್ರತಿವಾದಿ ಕಟ್ಟಿಕೊಂಡ ಮನೆ ಭಾಗವನ್ನು ಆತನ ಹಿಸ್ಸೆಗೆ ನೀಡಲು ನನ್ನ ತಕರಾರು ಇಲ್ಲ ಎಂದರೆ ಸರಿ.

ಸರ್ವೇ ನಂ. 298/1ಎ ಇದು ಅಂಕೋಲಾದಿಂದ ಗದ್ದೆಗೆ ಹೋಗುವ ಸಾರ್ವಜನಿಕರು ಓಡಾಡುವ ರಸ್ತೆಗೆ ಇದೆ ಎಂದರೆ ಸರಿ. ಸದರಿ ರಸ್ತೆ ಆಪಾಸ ನಾತೆಯಿಂದ ಪರಸ್ಪರ ಬಿಟ್ಟುಕೊಂಡ ರಸ್ತೆಯಾಗಿದೆ ಹೊರತು ಇದುವರೆಗೂ ಸಾರ್ವಜನಿಕ ರಸ್ತೆ ಆಗಿಲ್ಲ ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ಸದರಿ ರಸ್ತೆಯು ಇದುವರೆಗೂ ಡಾಂಬರೀಕರಣ ಮಾಡಿಲ್ಲ, ಮಣ್ಣಿನ ರಸ್ತೆ ಇರುತ್ತದೆ ಎಂದು ಹೇಳುತ್ತಾರೆ. ಸದರಿ ರಸ್ತೆಗೆ ಮಣ್ಣು ತುಂಬಿಸಿ ಪಂಚಾಯತಿಯವರು ಕೆಲಸ ಮಾಡಿರುತ್ತಾರೆಂದರೆ ಸರಿ. ಸದರಿ ಮಣ್ಣಿನ ರಸ್ತೆ ಮಾಡಲು ಪಂಚಾಯತಿಯವರು ತಮ್ಮ ಇಲಾಖೆಯ ಯೋಜನೆಯಲ್ಲಿ ಹಣ ಖರ್ಚು ಮಾಡಿರುತ್ತಾರೆಂದರೆ ಮಾಹಿತಿ ಇಲ್ಲ. ಸದರಿ ರಸ್ತೆ ಸ್ವಂತ ರಸ್ತೆ ಇರುತ್ತದೆ ಎಂದು ನಾನು ತಕರಾರು ಮಾಡಿಲ್ಲ ಎಂದರೆ ಸರಿ. ಸದರಿ ರಸ್ತೆ ನಮ್ಮ ಜಮೀನಿಗೆ ಲಗ್ತ ಇದೆ ಎಂದರೆ ಸರಿ. ನನಗೆ ಸಂಬಂಧಿಸಿದ ಮನೆ ನಂ.1056 ಸದರಿ ರಸ್ತೆಗೆ ಲಗ್ತ ಇದೆ ಎಂದರೆ ಸರಿ. ನಾನು ಕಟ್ಟಿಕೊಂಡ ಮನೆಯ ಲಗತ್ತಾಗಿ ಪಿತ್ರಾರ್ಜಿತವಾಗಿ ಬಂದ ಮನೆ ನಂ. 360 ಇದೆ ಎಂದರೆ ಸರಿ. ಸಾಕ್ಷಿಗೆ ತೋರಿಸಿದ ಭಾವಚಿತ್ರವನ್ನು ನೋಡಿ ಮೋಟಾರ ಸೈಕಲ ನಿಲ್ಲಿಸಿದ ಪಕ್ಕದಲ್ಲಿ

ನಮ್ಮ ಮನೆ ಇರುತ್ತದೆ ಎಂದು ತಿಳಿಸುತ್ತಾರೆ. ಸದರಿ ಭಾವಚಿತ್ರವನ್ನು ನಿಡಿ–1 ಎಂದು ಗುರುತಿಸಲಾಯಿತು.

ನಮ್ಮ ವಾಸದ ಮನೆ ಜಮೀನಿಗೆ ಲಗತ್ತಾಗಿ ಬಾಲಕೃಷ್ಣ ನಾರಾಯಣ ನಾಯ್ಕರವರ ಜಮೀನು ಇದೆ ಎಂದರೆ ಸರಿ. ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಬಾಲಕೃಷ್ಣ ರವರ ಜಮೀನು ಇದೆ ಎಂದರೆ ಸರಿ. ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಕಟ್ಟಿಗೆ ಗುಟ್ಟಿನ ಬೇಲಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸಾಕ್ಷಿಗೆ ತೋರಿಸಿದ ಭಾವಚಿತ್ರವನ್ನು ನೋಡಿ ಅದರಲ್ಲಿ ಕಟ್ಟಿಗೆ ಗುಟ್ಟದಿಂದ ಮಾಡಿದ ಬೇಲಿ ಕಾಣಿಸುತ್ತದೆ ಎಂದು ತಿಳಿಸಿದ್ದು, ಅದನ್ನು ನಿಡಿ–2, ಬೇಲಿ ಭಾಗವನ್ನು ಗುರುತಿಗಾಗಿ ನಿಡಿ–2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ತೋರಿಸಿದ ಇನ್ನೊಂದು ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ–3, ಬೇಲಿ ಭಾಗವನ್ನು ಗುರುತಿಗಾಗಿ ನಿಡಿ–3 ಎ ಎಂದು ಗುರುತಿಸಲಾಯಿತು.

ನಿಡಿ–2 ಮತ್ತು 3 ರಲ್ಲಿ ಕಾಣಿಸುವ ರಸ್ತೆಯನ್ನು 12 ನೇ ಪ್ರತಿವಾದಿ ಕಟುಂಬದವರು ಹಾಗೂ ಗಣಪತಿ ವಾರಸುದಾರ ಕುಟುಂಬದವರು ತಮ್ಮ ತಮ್ಮ ಮನೆಗೆ ಹೋಗಿ ಬರಲು ಉಪಯೋಗಿಸುತ್ತಾರೆಂದರೆ ಸರಿ. ನಿಡಿ–2 ಮತ್ತು 3 ರಲ್ಲಿ ಕಾಣಿಸುವ ರಸ್ತೆ ಅಂದಾಜು 3 ರಿಂದ 5 ಅಡಿ ಅಗಲ ಇರಬಹುದು. ನಿಡಿ–2 ಮತ್ತು 3 ರಲ್ಲಿ ತೋರಿಸಿದ ರಸ್ತೆ ಹೊರತುಪಡಿಸಿ 12 ನೇ ಪ್ರತಿವಾದಿ ಕಟುಂಬದವರು ಹಾಗೂ ಗಣಪತಿ ವಾರಸುದಾರ ಕುಟುಂಬದವರು ತಮ್ಮ ತಮ್ಮ ಮನೆಗೆ ಹೋಗಿ ಬರಲು ಬೇರೆ ರಸ್ತೆ

ಇರುವುದಿಲ್ಲ ಎಂದರೆ ಸರಿ. ಸದರಿ ರಸ್ತೆ ಮೂಲಕ ಸೈಕಲ್ ಹೊರತುಪಡಿಸಿ ಬೇರೆ ವಾಹನ ಒಯ್ಯಲು ಆಗುವುದಿಲ್ಲವೆಂದರೆ ಸಾಕ್ಷಿ, ಸ್ಕೂಟರ್ ಒಯ್ಯುತ್ತಾರೆಂದು ಹೇಳುತ್ತಾರೆ. ಸದರಿ ರಸ್ತೆಯು ರಿಕ್ಷಾ ಓಡಾಡುವಷ್ಟು ಅಗಲವಿರುವುದಿಲ್ಲವೆಂದರೆ ಸರಿ. ಸದರಿ ರಸ್ತೆ ನಮ್ಮ ಜಮೀನಿನಲ್ಲಿಯೇ ಇದೆ. ಸದರಿ ರಸ್ತೆ ನಮ್ಮ ಜಮೀನಿಗೆ ಸಂಬಂಧಪಟ್ಟಿದೆಯೆಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ನಿಡಿ–2 ಮತ್ತು 3 ರಲ್ಲಿ ಕಾಣಿಸುವ ಗುಟ್ಟದ ಬೇಲಿಯಿಂದ ಅಂದಾಜು 20–30 ಅಡಿ ದೂರದಲ್ಲಿ ನನ್ನ ಮನೆ ಇದೆ. ನನ್ನ ಮನೆಯ ಪಶ್ಚಿಮಕ್ಕೆ ಪಿತ್ರಾರ್ಜಿತ ಮನೆ ನಂ. 360 ಇದೆ ಎಂದರೆ ಸರಿ. ನಿಡಿ–2 ಮತ್ತು 3 ರಲ್ಲಿ ಕಾಣಿಸುವ ರಸ್ತೆ ಮೂಲಕ ಹೋಗಿ ಬರಲು ಕನಿಷ್ಠ 10–ಅಡಿ ಅಗಲ ಮಾಡಲು ಯಾವ ತೊಂದರೆಯು ಇರುವುದಿಲ್ಲವೆಂದರೆ ಸಾಕ್ಷಿ, ಅಷ್ಟೆಲ್ಲಾ ಬಿಡಲು ಆಗುವುದಿಲ್ಲ, ಒಂದು ವೇಳೆ ರಸ್ತೆ ಅಗಲ ಮಾಡಿದರೆ ಆ ಕುರಿತು ಪ್ರತಿವಾದಿಯರು ನಮಗೆ ರಸ್ತೆಗೆ ಪಡೆದ ಜಾಗೆಯಷ್ಟು ನೀಡಬೇಕಾಗುತ್ತದೆ ಎಂದು ಹೇಳುತ್ತಾರೆ. ಪಾಲುವಾಟ್ನೆಯಲ್ಲಿ ನಾವು ಮಾಡುತ್ತಿದ್ದ ವಹಿವಾಟು ಕ್ಷೇತ್ರದಲ್ಲಿ ಹೆಚ್ಚು ಕಡಿಮೆಯಾದರೆ ಸರಿಪಡಿಸಿಕೊಳ್ಳಲು ನನ್ನ ತಕರಾರು ಇಲ್ಲ ಎಂದರೆ ಸರಿ.

ನಿಪಿ–18 ಮತ್ತು 19 ದಾವಾ ಆಸ್ತಿಗಳಿಗೆ ಸಂಬಂಧಪಟ್ಟಿಲ್ಲ ಎಂದರೆ ಮಾಹಿತಿ ಇಲ್ಲ. ದಾವಾ ಆಸ್ತಿ ಪಾಲುವಾಟ್ನಿಗಾಗಿ ಕೇಳಿದ್ದೇನೆ ಎಂದು ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಗುರುತಿಸಿದ ಭಾವಚಿತ್ರಗಳ ಕುರಿತಾಗಿ ಸಿಡಿಯನ್ನು ನೀಡಿದ್ದು, ಅದನ್ನು ಪುರಾವೆಗೊಳಪಟ್ಟು ನಿಡಿ–4 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ 19,20 ಮತ್ತು 22 ನೇ ಪ್ರತಿವಾದಿ ಪರ ಶ್ರೀ ಬಿ.ಡಿ.ಎನ್. ವಕೀಲರಿಂದಃ

ಪ್ರತಿವಾದಿ ನಂ. 19, 20 ಮತ್ತು 22 ರವರ ತಂದೆ ಗಣಪತಿ ಬೀರಪ್ಪ ನಾಯ್ಕ ರವರು ಭೂ ನ್ಯಾಯ ಮಂಡಳಿ ಆದೇಶ ಮಾಡುವ ಪೂರ್ವದಿಂದಲೂ ಆಸ್ತಿಯನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆಂದರೆ ಸರಿ. ಮಾರಾಟ ಮಾಡಿದ ಕ್ಷೇತ್ರವನ್ನು ನಮ್ಮ ಹಿಸ್ಸೆಯಲ್ಲಿ ಪರಿಗಣಿಸಲು ತೊಂದರೆ ಇಲ್ಲ ಎಂದರೆ ಒಟ್ಟಾಗಿ ಮಾರಾಟ ಮಾಡಲಾಗಿದೆ ಎಂದು ಹೇಳುತ್ತಾರೆ. ಒಟ್ಟಾಗಿ ಮಾರಾಟ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 19, 20 ಮತ್ತು 22 ರವರ ತಂದೆಯಾದ ಗಣಪತಿಯ ಮನೆ ನಮ್ಮ ಮನೆಯ ಹಿಂಬದಿಯಲ್ಲಿದೆ ಎಂದರೆ ಸರಿ. ಪ್ರತಿವಾದಿ ನಂ. 19, 20 ಮತ್ತು 22 ರವರು ತಮ್ಮ ಮನೆಗೆ ಹೋಗಿ ಬರಲು ತೊಂದರೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿ ಇದ್ದ ರಸ್ತೆಯಲ್ಲಿ ಓಡಾಡಲು ತೊಂದರೆ ಇಲ್ಲ, ಆದರೆ ಹೊಸ ರಸ್ತೆ ಮಾಡಿಕೊಳ್ಳಲು ತಕರಾರು ಇದೆ ಎಂದು ಹೇಳುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.